ರೊಟ್ಟಿ ಹದಾ ತಪ್ಪೂದೀದೇ. ಕೊಡೂ ಮನಸ್ಸಲ್ಲಿ ಮಾಡದ್ರೆ ರುಚಿ ಹೆಚ್ಚತೀದ. ಕಾಯಹಾಲ್ ದಿನಕ್ಕೆರಡಸರ್ತಿ ಬಿಸಿ ಮಾಡದ್ರೆ ನಾಕ ದಿನಾ ಆದ್ರೂ ರುಚಿ ಏರೂದೇ ಇಳಿಯೂದ ಅಂಬೂದೇ ಇಲ್ಲ. ದ್ಯಾವ್ರೇ" ಅದೆಂಥ ಸಂಭ್ರಮ. ಉಪವಾಸಕ್ಕೆ ನಾಕು ದಿನ ಮುಂಚೇ ನಡೆವ ಈ ತಯಾರಿ. ಒಂದೇ ಸಮ ಬರುವ ಹೋಗುವ ಜನ, ಹೆಣ್ಣುಮಗಳಾದ್ದರಿಂದ ಬುಟ್ಟಿಯಿಂದೆತ್ತಿ ಬಂದವರಿಗೆ ಕೊಡುವ ದೊಡ್ಡ ಜವಾಬ್ದಾರಿಯ ಹೊಣೆ ಹೊತ್ತ ತಂಡದ ಸಕ್ರೀಯ ಪಾಲುದಾರಳಾದ ನನ್ನ ಅನವರತ ಓಡಾಟ. ಬುಟ್ಟಿಯ ಕೊಟ್ಟೆರೊಟ್ಟಿ ಖಾಲಿಯಾಗುತ್ತ ಆಗುತ್ತ, ನಮ್ಮ ಅಜ್ಜ ಇನ್ನೂ ಬರದಿದ್ದರೆ ಹೊಟ್ಟೆಯಲ್ಲಿ ಎಂಥದೋ ಸಂಕಟ. ''ಬರಬಾರದೇ ಇವನು'' ಅಜ್ಜಿ ನಗುತ್ತಿದ್ದಳು. ''ಶಿವರಾತ್ರಿಗೆ ಶಿವನ ಬರಾವು ಕಾಯ್ತರ. ನೀವು ಆ ಮುದುಕನ ಕಾಯ್ತರಲೇ.'' ಅಜ್ಜ ಬರದಿರುತ್ತಿರಲಿಲ್ಲ. ಕಥೆ ತರದಿರುತ್ತಿರಲಿಲ್ಲ. ನಮ್ಮ ಮದಣ್ಣ ವರ್ಷವಿಡೀ ಕಥೆ ಹೊಸೆಯುತ್ತಿದ್ದುದಕೂ ನಮ್ಮ ಅಜ್ಜನ ಬರುವಿಕೆಗೂ ಸಂಬಂಧದ ಹೆಣಿಗೆಯಿದ್ದುದು ಆಗ ತಿಳಿದಿರಲಿಲ್ಲ. ಬಂದವನೇ ಅಜ್ಜ ಬಾವಿಕಟ್ಟೆ ಸೇರಿ ಚೊಕ್ಕ ಮಿಂದು, ತನ್ನ ಬಟ್ಟೆ ಬರೆ ಎಲ್ಲ ಒಗೆದು ಹಾಕು, ಅಜ್ಜನನ್ನೊಮ್ಮೆ ಮಾತಾಡಿಸಿ ಬರುತ್ತಿದ್ದ. ''ಈ ಮಕ್ಕಳ ಎಳೆತ ಗಾಂವಕಾರರೇ, ಮೀರಕ್ಕಾಗಿಲ್ಲ ನೋಡಿ'' ಅನ್ನೋ ಮಾತು, ''ಹೂಂ, ಎಲ್ಲ ಮೀರೂದು ಅವನಿಗಾದ್ರೂ ಆಗೇದ ಅಂದೀರೇನು?'' ಅಂತ ಅಜ್ಜ ಮೇಲೆ ನೋಡಿ ಹೇಳುತ್ತ, ಈ ಮಕ್ಕೂ ನಿಮ್ಮ ಕಾಯ್ತಿದ್ರು ಹೇಳಿದ್ರೆ. ಋಣಾನುಬಂಧ ಸ್ವಾಮಿ. ಊಟ ಮಾಡಿ'' ಅನ್ನೋದು ವರ್ಷಾವರ್ಷ ಶಿವರಾತ್ರಿಯ ಹಾಗೇ ಆವರ್ತನಗೊಳ್ಳುವ ಮಾತು. ಅಜ್ಜನ ಎಲೆಗೆ ಊಟ ಬಡಿಸುವ ಉಮೇದಿಯೆಂದರೆ ಆಗೆಲ್ಲ ಅಂವ ಹೇಳುವುದು – ಮಗಾ, ಸಾಕು. ಈ ಹೊಟ್ಟೆ ಒಂದುಸರ್ತಿ ಸ್ವಾಹಾ ಮಾಡಿತೂ ಅಂದ್ರೆ ನಾಳೆಯೂ ಕೇಳತ್ತೆ. ಎಲ್ಲಿಂದ ತರ್ಲಿ? ಬ್ಯಾಡಾ ಮಗಾ, ಎಲ್ಲವೂ ಎಷ್ಟೋ ಅಷ್ಟೇ ಇದ್ದರೇನೇ – ಅದೆಷ್ಟೋ ವರ್ಷ ಕೇಳಿಸಿಕೊಂಡ ಮಾತು. ಬಡಕಲು ಕಪ್ಪು ಮೈಯ ಅಜ್ಜ, ನಡೆನಡೆದು ಪಾದ ಬಿರುಕು ಮೂಡಿದ ಹರಕು ಹವಾಯಿಯ ಅಜ್ಜ, ನರ ಉಬ್ಬಿದ ಅವನ ಬೆರಳುಗಳು, ಚಕ ಚಕ ಹೊಳೆವ ಆ ಕಣ್ಣುಗಳು. ಮೈ ಪೂರಾ ಸ್ವಾಮೀಜಿಯ ವೇಷ ಹೊತ್ತವರು ಕೊಟ್ಟದ್ದನ್ನೆಲ್ಲ ಬಕಬಕ ಮುಕ್ಕುವಾಗ, ಮೈಮೇಲೊಂದು ಶಾಸ್ತ್ರಕ್ಕೆ ರುದ್ರಾಕ್ಷಿ ಮಾಲೆಯೂ ಇಲ್ಲದ ಕಥೆಯಜ್ಜ. ಉಸಿರಿಗೊಮ್ಮೆ ''ಹೆಚ್ಚಿಂದು ತಗಾಬಾರದು ಮಗಾ. ಹೊಟ್ಟಿಗೂ ಮೈಗೂ'' ಅಂತಿರತಿದ್ದ. ಬದುಕು ಸುಂಟರಗಾಳಿಯ ಹಾಗೆ ತಿರುವಿ ಒಗೆದ ದರ್ದಿನಲ್ಲಿ ಕಥೆಯಜ್ಜ ಮರ್ತೇ ಹೋಗಿದ್ದನಲ್ಲ. ಈಗ, ಈ ಅಡಮುಟ್ಟ ಬಿಸಿಲಲ್ಲಿ ಅವನ ಉಸಿರ ಗಂಧ ತೀಡಿದಂತೆ ಆ ಮಾತುಗಳು ಕಿವಿ ತುಂಬಿದಂತಾಗಿತ್ತು. ''ಅಂವ ಹೇಳಿದ್ದ ನಾ ಯೇನ ತಿಳಕಂಡೆ ಥೊ'' ಅಂತ ಗೊಣಗಿಕೊಂಡಳು ಶಾಲಿನಿ ತುಸು ಜೋರಾಗಿಯೇ. ಸೋಮೇಶ್ವರದ ಬಳಿಯ ಹಂಪ್ಸ್‌ಗೆ ಬೈಕ್ ಸ್ಲೋ ಮಾಡಿದ್ದ ಪ್ರದೀಪನಿಗೆ, ಶಾಲಿನಿಯ ಮಾತು ಪೂರಾ ಕೇಳಿ ಕ್ಷಣ ಕೈ ಅದುರಿತು. ಹೀಗೆ ಸಂಬಂಧವೇ ಇಲ್ಲದೆ ಮಾತಾಡುತ್ತಾಳಲ್ಲ. 'ಇವಳನ್ನ ಸರಿಯಾದ ಡಾಕ್ಟರರ ಹತ್ರ ಕರ್ಕೊಂಡೋಗಬೇಕೋ ಹ್ಯಾಂಗೆ' ಅನ್ನೋ ಗಲಿಬಿಲಿಯಲ್ಲಿ ಬಿದ್ದ.



## ವಿನಯಾ ಒಕ್ಕುಂದ

ಸರ್ಕಾರಿ ಕಾಲೇಜಿನ ಅಧ್ಯಾಪಕಿ ವಿನಯಾ ಧಾರವಾಡದಲ್ಲಿ ನೆಲೆಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ಸ್ತ್ರೀ ನೋಟದ ಮೂಲಕ ಸೂಕ್ಷ್ಮವಾಗಿ ಚಿತ್ರಿಸುವ ಅವರು, 'ಬಾಯಾರಿಕೆ', 'ನೂರು ಗೋರಿಯ ದೀಪ', 'ಹಸಬಿ' ಎಂಬ ಕವಿತೆಯ ಸಂಗ್ರಹಗಳನ್ನು, 'ಊರ ಒಳಗಣ ಬಯಲು', 'ಉರಿ' ಎಂಬ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ.